ಸಿ.ಸಿ. ನಂ.701/2023

## ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಸನಗರ .

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಹಾಲಪ್ಪ | ಪಿ.ಡಬ್ಲ್ಯೂ- **5** |
| ತಂದೆಯ ಹೆಸರು | : | ಮಂಜಪ್ಪ | ಸಿ.ಡಬ್ಲ್ಯೂ-**5** |
| ವಯಸ್ಸು | : | **54** ವರ್ಷ | ಪ್ರಾಮಾಣೀಕರಿಸಿದ |
| ಉದ್ಯೋಗ | : | ಎ.ಎಸ್.ಐ., ರಿಪ್ಪನ್‌ಪೇಟೆ ಪೋಲೀಸ್ ಠಾಣೆ. | ದಿಃ **28/10/2025** |
| ವಾಸ | : | ರಿಪ್ಪನ್‌ಪೇಟೆ . | |

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು ದಿನಾಂಕ **16-06-2021** ರಿಂದ ಇಲ್ಲಿಯವರೆಗೂ ರಿಪ್ಪನ್‌ಪೇಟೆ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ. ಅಂತ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ**08.11.2021** ರಂದು ಚಾಸಾ-**1** ರವರು ನನಗೆ ಮತ್ತು ಚಾಸಾ-**6** ಮತ್ತು **7** ರವರಿಗೆ ಆರೋಪಿ ಗಾಂಜಾ ಸೇವನೆ ಮಾಡಿರುವ ಬಗ್ಗೆ ವೈದ್ಯಕೀಯ ತಪಾಸಣೆ ಮಾಡಿಸಿಕೊಂಡು ಬರಲು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು, ನಂತರ ನಾವು ಆರೋಪಿಯನ್ನು ಸದರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಾಸಾ-**8** ರವರ ಮುಂದೆ ಹಾಜರುಪಡಿಸಿದ್ದು, ನಂತರ ಚಾಸಾ-**8** ರವರು ಆರೋಪಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಆರೊಪಿಯು ಗಾಂಜಾ ಸೇವನೆ ಮಾಡಿರುವ ಬಗ್ಗೆ ಪಾಸಿಟಿವ್ ಬಂದಿರುವುದಾಗಿ ತಿಳಿಸಿ ವರದಿ ನೀಡಿದ್ದು, ನಂತರ ನಾವು ಆರೋಪಿಯೊಂದಿಗೆ ಠಾಣೆಗೆ

ವಾಪಸ್ಸಾಗಿ ಚಾಸಾ-9 ರವರ ಮುಂದೆ ವರದಿ ನೀಡಿರುತ್ತೇವೆ. ಸಾಕ್ಷಿಯು ನಿವೇದನೆಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು, ನಿವೇದನೆಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ ವಿ.ಎಸ್.ಕೆ. ವಕೀಲರಿಂದ.

ಆರೋಪಿಯನ್ನು ವೈದ್ಯರ ಮುಂದೆ ಹಾಜರುಪಡಿಸಿರುತ್ತೇವೆಂದು ಈ ಪ್ರಕರಣದಲ್ಲಿ ದಾಖಲೆಗಳನ್ನು ಸೃಷ್ಠಿಪಡಿಸಿ ಸುಳ್ಳು ನಿವೇದನೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಮತ್ತು ಬರುವಂತಹ ಗಾಂಜಾ ಸೇವನೆ ಮಾಡದಿದ್ದರೂ ಸಹ ಆರೋಪಿ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ .